ಮೀರಿ ಕೆಲಸಮಾಡಿ ಎಲ್ಲರಲ್ಲೂ ಸೈ ಎನಿಸಿಕೊಳ್ಳುತ್ತಿದ್ದ ಈ ಸಮಯಕ್ಕೇ ಮತ್ತೆ ಸೀಯೊನ್ ಬಸಿರಾಗಬೇಕೆ ಎಂದು ಗುರುಪಾದ ಅಂದುಕೊಂಡ.

ಈ ರೀತಿ ನಡೆಯುವುದು ತಾನು ಮೊದಲು ಕೆಲಸ ಮಾಡಿದ ಬೆಂಗಳೂರಿನಲ್ಲಿ ಹೊಸದಲ್ಲದಿದ್ದರೂ ಪ್ರತೀ ಬಾರಿ ಕೇಳಿದರೂ ಗುರುಪಾದನಿಗೆ ಎದೆ ಒಡೆಯುತ್ತಿತ್ತು. ಅವಳು ಬಸಿರಾಗಿದ್ದಾಳೆ ಎಂದು ಮೊದಲೇ ಗೊತ್ತಾದರೆ ಬೇರೆ ಯಾವುದೋ ಒಂದು ನೆವ ಹೇಳಿ ಕೆಲಸ ಕಾಯಂ ಮಾಡದೇ ಇರುವುದು, ಹೆರಿಗೆ ರಜೆ ತೆಗೆದುಕೊಂಡ ವರುಷ ಅವರಿಗೆ ಪ್ರಮೋಶನ್ ಅಥವಾ ಭಡ್ತಿ, ಎನ್ನ್ಯುಲ್ ಫರಫಾರ್ಮನ್ಸ್ ರೇಟಿಂಗ್ ಅಥವಾ ವಾರ್ಷಿಕ ಸಾಧನೆಯ ಅಂಕ ಕಡಿಮೆ ಅಥವಾ ಕೊಡದೇ ಇರುವುದು, ಇದನ್ನು ಎದುರಿಂದ ಅನುಭೋಗಿಸುವ ಹೆಂಗಸು ಗಟ್ಟಿಯಾಗಿದ್ದು ಖಾರವಾಗಿ ಹಕ್ಕುಗಳ ಬಗ್ಗೆ ಒಂದು ಇ – ಮೇಲ್ ಬರೆದರೆ ಮ್ಯಾನೇಜರ್ ತಡವರಿಸುತ್ತಾ ತಾಪಡ್ ತೋಪಡ್ ಎಲ್ಲವನ್ನೂ ಕೊಟ್ಟು ವಿಷಯವನ್ನು ಮುಚ್ಚಿ ಹಾಕುವುದು, ಮುಂದೆ ಅವಳೊಡನೆ ಹಗೆ ಸಾಗಿಸುವುದು ಇತ್ಯಾದಿ.

ಹೆಂಗಸೇ ಬಾಸ್ ಆಗಿದ್ದರೆ ಇನ್ನೊಂದು ಹುಡುಗಿಗೆ ಹೇಳುವ ಮಾತು: 'ಇನ್ನೆರಡು ವರುಷ ಕೆಲಸ ಮಾಡುತ್ತೀರಿ, ನಂತರ ಮದುವೆ, ಆಮೇಲೆ ಪ್ರೆಗ್ನೆನ್ಸಿ ಮಕ್ಕಳು, ನಂತರ ತಲೆಯೆಲ್ಲ ಡೇ ಕೇರ್, ಕೈ ಕಾಲಷ್ಟೇ ಆಫೀಸ್‌ನಲ್ಲಿ...' ಇದನ್ನು ಕೇಳುವುದರ ಜೊತೆಗೆ ಮಕ್ಕಳನ್ನು ಡೇ ಕೇರ್‌ನಲ್ಲಿ ಬಿಟ್ಟು ಆಫೀಸಿನಲ್ಲಿ ದುಡಿಯುವಾಗೂ ನಾನು ಮಗುವಿಗೆ ಸರಿಯಾಗಿ ಸಮಯ ಕೊಡುತ್ತಿಲ್ಲವೆನ್ನುವ ಅಪರಾಧಿ ಪ್ರಜ್ಞೆ, ಪ್ರೊಜೆಕ್ಟ್ ಡೆಲಿವರಿಯ ಸಂದರ್ಭದಲ್ಲೂ, ಐದರ ನಂತರ ಇರಲಾರದ ಹೆಂಗಸಿನ ಪರಿಸ್ಥಿತಿ... ಇವೆಲ್ಲಾ ಗುರುಪಾದನಿಗೆ ಅನುಭವಿಸಿದ, ಬಗೆಹರಿಸಲಾಗದ ಕಗ್ಗಂಟಾಗಿತ್ತು. ಹೆಂಗಸು ತನ್ನ ಕರಿಯರ್ ಅಥವಾ ವೃತ್ತಿ ಮತ್ತು ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು, ಹೆಂಗಸು ಮತ್ತು ಗಂಡಸಿನ 'ವರ್ಕ್ ಲೈಫ್ ಬ್ಯಾಲೆನ್ಸ್'ನ ವ್ಯಾಖ್ಯಾನವೇ ಪ್ರತ್ಯೇಕವಾಗಿದೆಯಲ್ಲ. ಅಥವಾ ಸಮಾಜದ ಮೂಲ ವಿಚಾರವಾದ 'ಗಂಡಸು ಆಹಾರವನ್ನು ತರುವುದು ಮತ್ತು ಕುಟುಂಬವನ್ನು ರಕ್ಷಿಸುವುದು, ಹೆಂಗಸು ಮಕ್ಕಳನ್ನು ಹಡೆಯುವುದು ಮತ್ತು ಸಂಸಾರದ ಆರೈಕೆ' ಎನ್ನುವ ವ್ಯಾಖ್ಯಾನದಿಂದ ದೂರ ಸರಿದಿದ್ದಕ್ಕೆ ಆಗುತ್ತಿರುವ ಅನಾಹುತವೇ... ಯಾವುದೂ ಗೊತ್ತಾಗದೇ, ಕಂಪ್ಯೂಟರ್ ಮುಂದೆಯೂ ಕುಳಿತುಕೊಳ್ಳಲಾಗದೇ ಸ್ವಲ್ಪ ಹೊತ್ತು ಶೌಚಾಲಯಕ್ಕೆ ಹೋಗಿ ಸುಮ್ಮನೆ ನೀರು ಬಿಟ್ಟು ಬಂದ. ಸ್ವಲ್ಪ ಹೊತ್ತು ಕ್ಯಾಂಟಿನಿಗೆ ಹೋಗಿ ಗ್ರೀನ್ ಟೀ ಕುಡಿದು ಬಂದ. ಅಷ್ಟು ಮುಖ್ಯವಲ್ಲದ ಮೀಟಿಂಗ್‌ಗಳನ್ನು ಮಧ್ಯಾಹ್ನಕ್ಕೆ ಮುಂದೆ ಹಾಕಿದ. ಮಧ್ಯಾಹ್ನ

**ಊರಿನ ಹೆಂಗಸರಿಗೆ ಆಗುವಂತೇ ಮಣ್ಣು, ಮಾವಿನ ಕಾಯಿ, ಬಿಂಬಲ ಕಾಯಿ ತಿನ್ನುವ ಹಂಬಲ... ದೇಹದಲ್ಲಿ ಆಗುವ ಬದಲಾವಣೆಗಳ ಬಗ್ಗೆ ನಿನಗೂ ಗೊತ್ತಲ್ಲ ಎಂದು... ರಾತ್ರಿ ಗಂಡನಿಂದಲೇ ಕಾಲು ಬೆನ್ನನ್ನು ತಿಕ್ಕಿಸಿಕೊಳ್ಳುವುದು ಇತ್ಯಾದಿಗಳನ್ನು ಸೀಯೊನ್ ಮೂಲಕ ಈ ದೇಶದ ಹೆಂಗಸರ ಬಯಕೆಗಳನ್ನೆಲ್ಲಾ ಗುರುಪಾದನಿಗೆ ತಿಳಿಯಬೇಕೆಂದೆನಿಸುತ್ತಿತ್ತು.**